ಪ್ರೀತಿಸ್ತೀನಿ. ಸತ್ರೆ ಏನು ಮಾಡ್ಲಿ ಹೇಳೋ? ಕರಗಿಸಿ ಮಣ್ಣು ಮಾಡಿ ನನ್ನದೇ ಭಾಗ ಮಾಡ್ಕೋತೀನಿ. ಕೋಣೆಯಿಂದ ಹೊರಗ್ಹೋಕ್ತಾ ಮುಖದಲ್ಲಿ ನಗು ಇರ್ಲಿ ಸರದಾರ. ಇಲ್ಲಿ ಹೆಣ ಬಿದ್ದಿಲ್ಲ. ಇದೇನು ಸೂತಕದ ಕೋಣೆ ಅಲ್ಲ."

ಕೊನೆಯ ಮಾತಂದ್ಲು.

"ವಿದ್ಯೆಯ ಸರಸ್ವತಿಗೆ ಮಕ್ಳಿಲ್ಲ. ಸುಖದ ಲಕ್ಷ್ಮಿಗೆ ಮಕ್ಳಿಲ್ಲ. ಹಸಿವು ನೀಗುವ ಅನ್ನಪೂರ್ಣೇಶ್ವರಿಗೆ ಸಂತಾನವೇ ಇಲ್ಲ. ಕಾಯೋ ದೇವಿ ದುರ್ಗೆನೂ ಬಂಜೇನೇ. ಹೆರೋರು ತಾಯಿ ಆದ್ರು. ಹೆರದೋರು ದೇವರಾದ್ರು. ತಾಯಾಗ್ಲಿಲ್ಲ ಬಿಡು. ದೇವಿ ಆಗ್ತೀನಿ."

★★★

ಮೊನ್ನೆ ಸಿಕ್ಕಿದ್ಲು ಮಂದಾಕಿನಿ. ಯಾರದ್ದೋ ಮದುವೇಲಿ. ಗಲಗಲಾಂತಿದ್ಲು.

"ಹ್ಯಾಗಿದ್ದೀಯೇ?" ಕೇಳ್ದೆ.

"ಚೆನ್ನಾಗಿದ್ದೀನೋ."

ಹತ್ರಕ್ಕೆ ಬಂದು ಕಣ್ಣು ಮಿಟುಕಿಸಿ, ಕಿವಿಯಲ್ಲಿ ಉಸುರಿದ್ಲು ಸುಂದರಿ.

"ಎಲ್ಲ ದೇವರಿಗೆ ಹುಟ್ಟಿದ ಥರಹ... ನಾನೊಬ್ಳು ಮನುಷ್ಯರ ತರಹಾ ಅನ್ನೋ ಹಾಗೆ ಆಡ್ತಿದ್ರು. ಒಂದು ಸಾರಿ ಜಾಡಿಸ್ದೆ ನೋಡು ಅದೇನು ನೀವು ಮಾತ್ರ ಮನುಷ್ಯಾರಾ? ನಾನೇನು ಸ್ವಯಂಭೂನಾ? ನನ್ನಷ್ಟಕ್ಕೆ ನನ್ನನ್ನು ಬಿಟ್ಟಿದ್ದಿದ್ರೆ ಮೊಳೀತಿದ್ದೆ, ಬೇರು ಬಿಡ್ತಿದ್ದೆ, ಬೆಳೀತಿದ್ದೆ, ಸಾಕ್ತಿದ್ದೆ. ಸ್ವಾರ್ಥಕ್ಕೆ ಒಡ್ಡು ಕಟ್ಟಿದ ಮೇಲೆ ಪಾಚಿ ಕಟ್ಟುತ್ತಪ್ಪ. ಇವತ್ತಿನ ಅನ್ನ ನಾಳೆಗಿಟ್ರೆ ತಂಗ್ಳು. ಗಂಗೆ ಸ್ವಚ್ಛ ಅಮೃತ, ಜೀವಜಲ, ತೊಳೆದು ವಿಷ ಮಾಡಿದ್ದು ನೀವಲ್ವಾ? ಸುಮ್ಮನಿತ್ತು ಅಂತ ಸಹ್ಯಾದ್ರಿ ಬೆಟ್ಟವನ್ನೇ ಬಯಲು ಮಾಡಿದ್ರಿ, ಸ್ವಾರ್ಥಿಗಳು. ಭೂಮಿ ಒಮ್ಮೆ ಮೈ ಕೊಡವ್ಬೇಕು. ಮಣ್ಣು ತಿನ್ನಿಸ್ಬೇಕು ಅನ್ನಿಸ್ತು. ಜಾಡಿಸ್ದೆ. ರಮಿಸ್ತಾನೇ ಇದ್ದೆ. ಸೆಟಕಂಡೇ ಇದ್ರು. ಒಮ್ಮೆ ಕುತ್ತಿಗೆ ಪಟ್ಟಿ ಹಿಡ್ದು ಕಪಾಳಕ್ಕೆ ಬಾರಿಸ್ದೆ ನೋಡು, ಎಲ್ಲಾ ಮನುಷ್ಯರಾದ್ರು." ಗಲ ಗಲ ನಕ್ಳು!

ಕೇಳ್ಬೇಕು ಅಂದ್ಕೊಂಡೆ.

"ಮಕ್ಕ್ಳಾಯ್ತೇನೇ ಮಂದಾಕಿನಿ?"

ಕಪಾಳಕ್ಕೊಂದು ಬಾರಿಸಿದ್ರವ್ಳು? ನಕ್ಕು ಸುಮ್ನಾದೆ!


## ಎಸ್.ಎನ್. ಸೇತುರಾಮ್

ಲೇಖಕರ ಊರು ಹಾಸನ ಜಿಲ್ಲೆಯ 'ಶಂಖ' ಅನ್ನುವ ಹಳ್ಳಿ. ಹುಟ್ಟಿ ಬೆಳೆದದ್ದು, ಓದಿದ್ದು ಬೆಂಗಳೂರಿನಲ್ಲಿ. ವಿಜ್ಞಾನದ ಪದವಿ. ಆದಾಯ ತೆರಿಗೆ ಇಲಾಖೆಯಲ್ಲಿ ಡೆಪ್ಯೂಟಿ ಕಮಿಶನರ್ ಆಗಿ ಸ್ವಯಂ ನಿವೃತ್ತಿ ಹೊಂದಿದ್ದು, ಸದ್ಯ ಆದಾಯ ತೆರಿಗೆ ಸಲಹೆಗಾರರಾಗಿ ಕೆಲಸ ಮುಂದುವರಿಸಿದ್ದಾರೆ.

ಪ್ರವೃತ್ತಿಯಾಗಿ ಹವ್ಯಾಸಿ ನಾಟಕರಂಗದಲ್ಲಿ ನಟನಾಗಿ ಗುರುತಿಸಿಕೊಂಡಿದ್ದು. ನಂತರ ಟಿ.ಎನ್. ಸೀತಾರಾಮ್ ಅವರ ಧಾರಾವಾಹಿಗಳು; ಮುಖ್ಯವಾಗಿ 'ಮಾಯಾಮೃಗ', 'ಮನ್ವಂತರ', 'ಮುಕ್ತಾ' ಬರೆದು ನಿರ್ದೇಶಿಸಿದ ಧಾರವಾಹಿಗಳು. 'ಮಂಥನ', 'ದಿಬ್ಬಣ' ಮತ್ತು 'ಅನಾವರಣ'. ಬರೆದು ನಿರ್ದೇಶಿಸಿದ ನಾಟಕಗಳು, 'ನಿಮಿತ್ತ', 'ಗತಿ' ಮತ್ತು 'ಅತೀತ'. ಈಗ ಸದ್ಯ 'ಗತಿ' ಮತ್ತು 'ಅತೀತ' ನಾಟಕಗಳ ಪ್ರದರ್ಶನ ನಡೆಯುತ್ತಿವೆ. 'ನಿಮಿತ್ತ' ಮತ್ತು 'ಗತಿ' ಪ್ರಕಟವಾಗಿವೆ.